ಗಡಿಯಾರಕ್ಕೆ ವಿಶೇಷ ಶಕ್ತಿ ಇದ್ದರೆ... ಛೇ! ಅನೂಹ್ಯ ಇದ್ದಾನಲ್ಲ ಸಮಸ್ಯೆ ಪರಿಹಾರಕ್ಕೆ... ಮನಸ್ಸು ಗಟ್ಟಿ ಮಾಡಿಕೊಂಡು 'ಆದಿಮೂರ್ತಿ, ನೀವು ಅಂಗಡಿ ಖಾಲಿ ಮಾಡಿ! ಮುಂದಿನದ್ದನ್ನು ನನಗೆ ಬಿಡಿ' ಎಂದ.

'ಆಯ್ತು! ಖಾಲಿ ಮಾಡೋದಷ್ಟೆ ನನ್ನ ಕೆಲಸ. ನಿಮ್ಮ ರಕ್ಷಣೆಯ ಹೊಣೆ ನಿಮ್ಮದೇ!' ಮತ್ತೊಮ್ಮೆ ಎಚ್ಚರಿಸಿದ ಆದಿಮೂರ್ತಿ.

ಆದಿಮೂರ್ತಿ ಮತ್ತೊಂದು ಅಂಗಡಿ ಹುಡುಕಿ ಗಡಿಯಾರಗಳನ್ನೆಲ್ಲಾ ಅಲ್ಲಿಗೆ ವರ್ಗಾಯಿಸಿದ. ಆ ದಿನ ರಮೇಶ ತುಂಬಾ ಆತಂಕದಲ್ಲಿದ್ದ. ಆಗಾಗ ಎದೆ ನೋಯುತ್ತಿರುವ ಅನುಭವವಾಯಿತು ಅವನಿಗೆ. ಸಮಾಧಾನಕ್ಕೋಸ್ಕರ ಅನೂಹ್ಯನನ್ನು ಕೂಡ ಪಕ್ಕದಲ್ಲೇ ಕೂಡಿಸಿಕೊಂಡಿದ್ದ ಅವನು. ಅಂಗಡಿ ಖಾಲಿಯಾಯಿತೆನ್ನುವ ಸುದ್ದಿ ಬಂದಾಗ ಅವನ ಮನಸ್ಸು ಕೊಂಚ ನಿರಾಳವಾಯಿತು.

ಅಂದು ರಾತ್ರಿ ರಮೇಶ ಎಂದಿನಂತೆ ಊಟ ಮುಗಿಸಿ, ಸ್ವಲ್ಪ ಹೊತ್ತು ದೂರದರ್ಶನದ ಕಾರ್ಯಕ್ರಮಗಳನ್ನು ನೋಡಿ ಮಲಗಿದ. ತಲೆಯಲ್ಲಿ ಮುಂದೆ ಮಾಡಬೇಕಾದ ಕೆಲಸಗಳ ಬಗೆಗಿನ ವಿಚಾರಗಳು ಸುಳಿದಾಡುತ್ತಿದ್ದವು. ಸ್ವಲ್ಪ ಸಮಯದ ನಂತರ ಅವನು ನಿದ್ದೆಗೆ ಜಾರಿದ.

ರಮೇಶ ಕತ್ತಲೆಯಲ್ಲಿ ನಡೆಯುತ್ತಿದ್ದಾನೆ. ಸ್ವಲ್ಪ ದೂರದಲ್ಲಿ ಅಸ್ಪಷ್ಟವಾಗಿ ಬೆಳಕು ಕಾಣಿಸುತ್ತಿದೆ. ಅವನು ಬೆಳಕಿನ ದಿಕ್ಕಿನಲ್ಲಿ ನಡೆದಾಗ ಸಿಕ್ಕಿದ್ದು ಹಳೆಯ ಭವನ! ಅದನ್ನು ಪ್ರವೇಶಿಸಿ ಬೆಳಕಿನ ಮೂಲವನ್ನೇ ಹುಡುಕುತ್ತಾ ಒಂದು ದೊಡ್ಡ ಪಡಸಾಲೆಗೆ ಬರುತ್ತಾನೆ. ಅಲ್ಲಿ ಎಲ್ಲಾ ಗೋಡೆಗಳೂ ಗಡಿಯಾರದಿಂದ ತುಂಬಿ ಹೋಗಿವೆ. ಅಲ್ಲದೆ ಆ ಗಡಿಯಾರಗಳು ವಿವಿಧ ಆಕಾರಗಳಲ್ಲಿ, ವಿವಿಧ ಗಾತ್ರಗಳಲ್ಲಿವೆ. ಆದರೂ ಗೋಡೆಯಲ್ಲಿ ಗಡಿಯಾರಗಳು ಹೇಗೆ ಜೋಡಿಸಿಕೊಂಡಿದೆಯೆಂದರೆ, ಒಂದೇ ಒಂದು ಗಡಿಯಾರವನ್ನು ಪ್ರತ್ಯೇಕಿಸಿ ನೋಡಿ ಅದರಲ್ಲಿರುವ ಸಮಯ ತಿಳಿಯುವುದು ಬಹಳ ಕಷ್ಟ. ಅವನು ತದೇಕಚಿತ್ತದಿಂದ ಗಡಿಯಾರಗಳನ್ನೇ ದಿಟ್ಟಿಸಿ ನೋಡುತ್ತಿದ್ದಾನೆ. ಇದ್ದಕ್ಕಿದ್ದಂತೆ ಮಧ್ಯದಲ್ಲಿದ್ದ ಒಂದು ದೊಡ್ಡ ಗಡಿಯಾರದಲ್ಲಿ ಅವನಿಗೆ ಅಪ್ಪನ ಮುಖ ಕಾಣಿಸಿತು. ಆ ಗಡಿಯಾರದಲ್ಲಿ ಮುಳ್ಳುಗಳೇ ಇಲ್ಲ. ಅಪ್ಪನ ಧ್ವನಿ ಕೂಡಾ ಅವನಿಗೆ ಕೇಳಿಸುತ್ತಿದೆ– 'ಇಲ್ಲಿರುವ ಪ್ರತಿಯೊಂದು ಗಡಿಯಾರವೂ ಒಬ್ಬೊಬ್ಬರಿಗೆ ಸೇರಿದ್ದು! ಅದನ್ನು ಅವರೇ ಹುಡುಕಿಕೊಳ್ಳಬೇಕು. ನಿನ್ನ ಗಡಿಯಾರವನ್ನು ನೀನೇ ಹುಡುಕಬೇಕು! ಅದರಲ್ಲಿ ನಿನ್ನ ಕಾಲಾವಕಾಶವಿದೆ.' ನಂತರ ಅಪ್ಪನ ಧ್ವನಿ ಸ್ತಬ್ಧವಾಯಿತು.

ರಮೇಶ ಕಂಗೆಡಿಸುವ ಆ ಸ್ವಪ್ನದಿಂದ ಬೆಚ್ಚಿಬಿದ್ದು ಎದ್ದು ಅದರ ಅರ್ಥವನ್ನೇ ಯೋಚಿಸುತ್ತಾ ಕುಳಿತ.


## ಎನ್. ಮಧುಸೂದನ

ಅನುವಾದಕರೂ ಆಗಿರುವ ಲೇಖಕರು ಬೆಂಗಳೂರಿನವರು. ಕೇಂದ್ರ ಸರ್ಕಾರದ ಉದ್ಯೋಗಿ. ಅರ್ಥರ್ ಕಾನ್‌ನ ಡಾಯ್ಲ್‌ನ ಅನೇಕ ಪತ್ತೆದಾರಿ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ; ಅವು 'ಮಯೂರ'ವೂ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 'ಪದಸಂಚಯ' ಎಂಬ ಕನ್ನಡ ಸಾದೃಶ್ಯಾರ್ಥಕ ಪದಕೋಶವನ್ನು ಬಿ.ಆರ್. ಪ್ರಕಾಶ್ ಜೊತೆಗೂಡಿ ಸಂಪಾದಿಸಿ ಪ್ರಕಟಿಸಿದ್ದಾರೆ.